ಉಪ ಬಂದೀಖಾನೆ ಕಟ್ಟಡ ನಿರ್ಮಿಸುವುದು

1045 (1270) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆಯಲ್ಲಿ ವಾಸಮಾಡಲು ಯೋಗ್ಯವಿಲ್ಲದ ಉಪಬಂದೀಖಾನೆ ಕಟ್ಟಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸಲು ತೆಗೆದುಕೊಂಡಿರುವ ಕ್ರಮಗಳಾವುವು?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು) :

ಅ) ಬಂದಿದೆ.

ಆ) ನೂತನ ತಾಲ್ಲೂಕು ಉಪಕಾರಾ ಗೃಹ ಕಟ್ಟಡ ನಿರ್ಮಿಸಲು ಕಂದಾಯ ಇಲಾಖಾ ಅಧಿಕಾರಿಗಳಾದ ತಹಶೀಲ್ದಾರರೊಂದಿಗೆ ಚರ್ಚಿಸಿ ಅಗತ್ಯ ಜಮೀನು ಮಂಜೂರಾತಿಗಾಗಿ ಪತ್ರ ವ್ಯವಹಾರ ಮಾಡಿ ವರದಿ ನೀಡಲು ಅರಸೀಕೆರೆ ತಾಲ್ಲೂಕು ಉಪಕಾರಾಗೃಹದ ಅಧೀಕ್ಷಕರಿಗೆ ಸೂಚಿಸಿದ್ದು, ಜಮೀನು ಮಂಜೂರಾದ ನಂತರ ನೂತನ ಉಪಕಾರಾಗೃಹ ಕಟ್ಟಡ ಕಟ್ಟುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ಸದಸ್ಯ ಕಾರ್ಯದರ್ಶಿ ನೇಮಕಾತಿ

1047 (1272) ಶ್ರೀ ಶ್ರೀನಿವಾಸ ಎಂ. (ಮಂಡ್ಯ) : ಮಾನ್ಯ ಬಂದರು, ಒಳನಾಡು ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಹುದ್ದೆಗೆ ಐ.ಎಫ್.ಎಸ್. ಅಧಿಕಾರಿಗಳನ್ನೇ ಕಡ್ಡಾಯವಾಗಿ ನೇಮಿಸಬೇಕೆಂಬ ನಿಯಮಗಳೇನಾದರು ಇವೆಯೇ;

ಆ) ಹಾಗಿಲ್ಲದಿದ್ದಲ್ಲಿ, ಸದಸ್ಯ ಕಾರ್ಯದರ್ಶಿ ನೇಮಕಾತಿ ಮಾಡುವಾಗ ಯಾವ ಮಾನದಂಡಗಳನ್ನು ಅನುಸರಿಸಬೇಕಾಗುತ್ತದೆ;

ಇ) ಹಾಗಿದ್ದಲ್ಲಿ, ಈ ಮಾನದಂಡಗಳನ್ನು ಹಾಲಿ ಸದಸ್ಯ ಕಾರ್ಯದರ್ಶಿಯವರನ್ನು ನೇಮಕಾತಿ ಮಾಡುವಾಗ ಅನುಸರಿಸಲಾಗಿದೆಯೇ;